# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 415/2019

(ಪ್ರಾಸಾ-1 ಚಾಸಾ-1 )
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು
ದಿಃ 28.02.2022.

| | | |
|---|---|---|
| ಸಾಕ್ಷಿದಾರರ ಹೆಸರು | - | ಅಣ್ಣಾಮಲೈ, |
| ತಂದೆಯ/ಗಂಡನ ಹೆಸರು | - | ಪುಸಂದರಮ್, |
| ವಯಸ್ಸು | - | 72 ವರ್ಷ, |
| ಉದ್ಯೋಗ | - | ಇಲ್ಲ, |
| ವಾಸ | - | ಕಿತ್ತಗನೂರು. |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

ನಾವು ಪರಿಶಿಷ್ಟ ಜಾತಿಯ ಆದಿ ದ್ರಾವಿಡ ಜಾತಿಗೆ ಸೇರಿದವರು. ಚಾಸಾ-2 ರಿಂದ 7 ಗೊತ್ತು. ನಮ್ಮ ಮನೆಯ ಹತ್ತಿರದವರು. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಗೊತ್ತು.

2. ಆರೋಪಿ ನಮ್ಮ ಪಕ್ಕದ ಸೈಟ್ ನವರು. ನನ್ನ ಸೈಟ್ ನಂ.100. ಆರೋಪಿಯು ನನಗೆ ಕೆಟ್ಟ ಮಾತುಗಳಿಂದ ಬೈದು ಹೊಡೆದಿದ್ದನು. ಆರೋಪಿಯು ಈಗಾಗಲೇ ತನ್ನ ಸೈಟಿನಲ್ಲಿ ಕೌಂಪೌಂಡ್ ಅನ್ನು ಕಟ್ಟಿದ್ದನು. ನನ್ನ ಸೈಟಿನಲ್ಲಿ ಕೌಂಪೌಂಡ್ ಕಟ್ಟುತ್ತಿದ್ದಾಗ ನನಗೆ ಹಲ್ಲೆ ಮಾಡಿದ್ದನು. ಘಟನೆಯಲ್ಲಿ ನನ್ನ ಬಾಯಿಗೆ ಮತ್ತು ಕೈಗೆ ಗಾಯಗಳಾಗಿದ್ದವು. ಘಟನೆಯಾದ ಹತ್ತು ದಿನಗಳ ನಂತರ ನನ್ನ ಹಲ್ಲು ಉದಿರುಹೋಗಿತ್ತು. ದಿಃ15.4.2019 ರಂದು ಸಂಜೆ 6 ಗಂಟೆ ಸಮಯದಲ್ಲಿ ನಮ್ಮ ಸೈಟಿನ ಮುಂದೆ ರಸ್ತೆಯ ಬಳಿ ಗಲಾಟೆಯಾಗಿತ್ತು. ಈ ಮುಂಚೆಯೇ ನಮ್ಮ ಎದುರಿನ ಸೈಟಿನವರ ಜೊತೆಯವರ ಗಲಾಟೆ ಮಾಡಿದ್ದನು ನಾನು ನೋಡಿ ಹೋಗಿದ್ದೆನು ನನ್ನನ್ನು ನೋಡಿ ಒಮ್ಮೆಲೆ ಆರೋಪಿ ಹೊಡೆದಿದ್ದನು. ನನ್ನ ಮಗನಿಗೂ ಹೊಡೆದಿದ್ದನು ನನ್ನ ಮಗನ ಹೆಸರು ಮುರುಘನ್.

3. ಕೌಂಪೌಂಡ್ ವಿಚಾರಕ್ಕೆ ಸಂಬಂಧಿಸಿದಂತೆ ನನಗೂ ಹಾಗೂ ಆರೋಪಿಗೂ ಮುಂಚೆಯಿಂದಲೇ ತಕರಾರು ಇತ್ತು. ನಿನ್ನ ಅಮ್ಮನಾ ಕೇಯಾ, ನಿನ್ನ ಅಕ್ಕನಾ ಕೇಯಾ ಎಂದು ಅವಾಚ್ಯವಾಗಿ ಬೈದಿದ್ದನು. ನಾನು ಗಲಾಟೆ ಬಗ್ಗೆ ದೂರು ನೀಡಿದ್ದೆ.

ಈ ಹಂತದಲ್ಲಿ ದೂರು ಕಡತದಲ್ಲಿ ಲಭ್ಯವಿಲ್ಲದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಗಾಗಿ ಕಾಲಾವಕೋಶ ಕೋರಿದ್ದು ಮುಂದುವರಿದ ಮುಖ್ಯ ವಿಚಾರಣೆಯನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಂಡು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಮೋಹನ ಬಾಡಗಂಡಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು